**<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು :- ಶ್ರೀ ಬಿ ಎಂ ಆರ್ ವಕೀಲರಿಂದ 2 ನೇ ಎದುರುದಾರರ ಪರವಾಗಿ</u>**

5. ನಾನು 7 ನೇ ವಿದ್ಯಾಭ್ಯಾಸ ಮಾಡಿರುತ್ತೇನೆ. ತುರುವನೂರು ಪೋಲೀಸರು ಅಪಘಾತದ ಬಗ್ಗೆ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ ಎಂದರೆ ಸರಿ. ಈ ಅಪಘಾತದಲ್ಲಿ ಸುರೇಶ್ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ಮೃತ ಪಟ್ಟಿರುವವರನ್ನು ಹೊರತುಪಡಿಸಿ ಅಪಘಾತದಲ್ಲಿ ಇಬ್ಬರು ಗಾಯಗೊಂಡಿರುತ್ತಾರೆ. ಸುರೇಶ್ ರವರು ಚಾಲನೆ ಮಾಡುತ್ತಿದ ಮೋಟಾರ್ ಸೈಕಲ್ ಮೇಲೆ ಮೂರು ಜನ ಸವಾರು ಮಾಡುತ್ತಿದ್ದರು. ತುರುವನೂರು ಪೋಲೀಸರು ನನ್ನ ಹಾಗೂ ಸುರೇಶ್ ಇಬ್ಬರ ಮೇಲೆ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ನನ್ನ ವಿರುದ್ಧ ಕೂಡ ಪೋಲಿಸರು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಅಪಘಾತದ ಸಮಯದಲ್ಲಿ ನನಗೆ ಚಾಲನಾ ಪರವಾನಿಗೆ ಇರಲಿಲ್ಲ ಎಂದು ದೋಷಾರೋಪಣೆ ಮಾಡಲಾಗಿದೆ ಎಂದರೆ ಸರಿ. ನನ್ನ ವಾಹನ ಚಾಲನಾ ಪರವಾನಿಗೆ ಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

6. ನನ್ನ ಮೋಟಾರ್ ಸೈಕಲ್ ನಂ.ಕೆಎ-16-ಇಡಿ-8851 ಇರುತ್ತದೆ ಎಂದರೆ ಸರಿ. ಅದರ ವಿಮಾ ಪಾಲಿಸಿ ನಂ.429087 ಇರುತ್ತದೆ ಎಂದರೆ ಸರಿ. ಸದರಿ ವಿಮೆಯನ್ನು ನನ್ನ ವಾಹನಕ್ಕೆ ನಾನು ತೆಗೆದುಕೊಂಡಿರುತ್ತೇನೆ ಎಂದರೆ ಸರಿ. 2 ನೇ ಎದುರುದಾರ ನನ್ನ ವಾಹನದ ವಿಮೆಯನ್ನು ನೀಡಿದ ಕಂಪನಿ ಎಂದರೆ ಸರಿ. 1 ನೇ ಎದುರುದಾರ ಕೆಎ-52-ಇ-7688 ವಾಹನ ಮಾಲೀಕರು ಇರುತ್ತಾರೆ ಎಂದರೆ ಸರಿ. ಸದರಿ ವಾಹನವನ್ನು ಸುರೇಶ್ ಚಾಲನೆ ಮಾಡುತ್ತಿದ್ದರು ಎಂದರೆ ಸರಿ. ಸದರಿ ವಾಹನಕ್ಕೆ ಅಪಘಾತವಾದ ದಿನ ವಿಮೆ ಇರಲಿಲ್ಲ ಎಂದರೆ ಸರಿ. ಆದ್ದರಿಂದ ವಿಮಾ ಕಂಪನಿಯನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನನ್ನ ಅರ್ಜಿಯಲ್ಲಿ ನನ್ನ ಹಾಗೂ ಕೆಎ-52-ಇ-7688 ವಾಹನದ ಚಾಲಕನ ನಿರ್ಲಕ್ಷತನ ಇರುತ್ತದೆ ಎಂದು ಹೇಳಲಾಗಿದೆ ಎಂದರೆ ಸರಿ. ನನ್ನ ವಾಹನದ ವಿಮಾ ಕಂಪನಿಯಿಂದ ಪರಿಹಾರ ಪಡೆಯಬೇಕಾದರೆ ವಾಹನ ಚಾಲಕನಿಗೆ ಅಪಘಾತವಾದ ದಿನ ಚಾಲನಾ ಪರವಾನಿಗೆ ಇರಬೇಕು ಎಂದರೆ ಸರಿ.

7. ನನ್ನ ತಪ್ಪಿನಿಂದ ನಾನೇ ಅಪಘಾತ ಮಾಡಿರುವುದರಿಂದ ನಾನು 2 ನೇ ಎದುರುದಾರ ವಿಮಾ ಕಂಪನಿಯಿಂದ ಪರಿಹಾರ ಪಡೆಯಲು ಭಾದ್ಯಸ್ಥನಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಅಪಘಾತದಲ್ಲಿ ತೀವ್ರ ಸ್ವರೂಪದ ಗಾಯಗಳು ಆಗಿರುತ್ತವೆ ಹಾಗೂ ಅಂಗನ್ಯೂನ್ಯತೆ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎ.ಎಂ.ಎ.ಸಿ.ಟಿ, ಚಿತ್ರದುರ್ಗ